# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್‌ಭವನ,
ಮೈಸೂರು-570005.

ಸಂಖ್ಯೆ: ಹ.ಶಾ./ಆಶಾ./01/2022-23

ದಿನಾಂಕ: 15-12-2022

## ಸುತ್ತೋಲೆ

ವಿಷಯ: ಆದಾಯ ತೆರಿಗೆ (Income Tax) ಮತ್ತು GST ವಿಷಯಗಳ ಕುರಿತು ಕಾರ್ಯಾಗಾರ ಆಯೋಜಿಸಿರುವ ಬಗ್ಗೆ.

ಉಲ್ಲೇಖ: 1. ಸರ್ಕಾರಿ ಆದೇಶ ಸಂ: ಇಡಿ/387/ಯುಆರ್.ಸಿ./2022, ಬೆಂಗಳೂರು, ದಿನಾಂಕ: 01-12-2022.

2. ಮಾನ್ಯ ಕುಲಪತಿಗಳ ಅನುಮತಿ ದಿನಾಂಕ: 15-12-2022.

*****

ಉಲ್ಲೇಖ (1)ರನ್ವಯ, ಘನ ಸರ್ಕಾರದ ಉದ್ದೇಶಿತ ಸುಶಾಸನ ಮಾಸದ (Good Governance Month) ಆಚರಣೆ ಭಾಗವಾಗಿ, ವಿಶ್ವವಿದ್ಯಾನಿಲಯದಲ್ಲಿ ಹಣಕಾಸು ವಿಷಯಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವ ಸಲುವಾಗಿ, ಉಲ್ಲೇಖ (2)ರ ಅನುಮೋದನೆ ಮೇರೆಗೆ, ಆದಾಯ ತೆರಿಗೆ (Income Tax) ಮತ್ತು GST ವಿಷಯಗಳ ಕುರಿತು ಅರ್ಧ ದಿನದ ಕಾರ್ಯಾಗಾರ (Workshop)ವನ್ನು **ದಿನಾಂಕ: 19-12-2022**ರ **ಸೋಮವಾರ ಬೆಳಿಗ್ಗೆ 11:00** ಗಂಟೆಗೆ, **ಐ.ಓ.ಇ. ಸಭಾಂಗಣ, ಮಾನಸಗಂಗೋತ್ರಿ,** ಇಲ್ಲಿ ಆಯೋಜಿಸಲಾಗಿದೆ.

ಆದ್ದರಿಂದ, ವಿಶ್ವವಿದ್ಯಾನಿಲಯದ ಬಟವಾಡೆ ಅಧಿಕಾರಿಗಳು / ವಿಭಾಗಾಧ್ಯಕ್ಷರುಗಳು /ನಿರ್ದೇಶಕರುಗಳು /ಪ್ರಾಂಶುಪಾಲರುಗಳು, ತಮ್ಮ ಅಧೀನ ಕಛೇರಿಯಲ್ಲಿ ಹಣಕಾಸು ಸಂಬಂಧಿತ ಕಾರ್ಯನಿರ್ವಹಣೆ ಮಾಡುತ್ತಿರುವ ಒಬ್ಬ ಕಾರ್ಯನಿರ್ವಾಹಕರೊಂದಿಗೆ ಕಡ್ಡಾಯವಾಗಿ ಭಾಗವಹಿಸಿ, ಕಾರ್ಯಾಗಾರದ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದು ಹಾಗೂ ಕಛೇರಿ ಆಡಳಿತದಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಹಣಕಾಸು ಅಧಿಕಾರಿ.

ಗೆ:

1. ಎಲ್ಲಾ ವಿಭಾಗಗಳ ಅಧ್ಯಕ್ಷರು/ನಿರ್ದೇಶಕರು/ಸಂಯೋಜಕರು, ಸ್ನಾತಕೋತ್ತರ ಅಧ್ಯಯನ ವಿಭಾಗ/ಕೇಂದ್ರ, ಮಾನಸಗಂಗೋತ್ರಿ, ಮಂಡ್ಯ/ಹಾಸನ/ಚಾಮರಾಜನಗರ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಪ್ರಾಂಶುಪಾಲರು, ಮಹಾರಾಜ/ಯುವರಾಜ/ಸಂಜೆ/ಲಲಿತ ಕಲೆಗಳ ಕಾಲೇಜುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಆಡಳಿತಾಧಿಕಾರಿಗಳು, ಸೆನೆಟ್ ಭವನ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ಐ.ಓ.ಇ., ಮಾನಸಗಂಗೋತ್ರಿ, ಮೈಸೂರು.- **ನಿಗಧಿತ ದಿನಾಂಕದಂದು ಸಭಾಂಗಣವನ್ನು ಸ್ವಚ್ಛಗೊಳಿಸಿ, ಕಾರ್ಯಕ್ರಮಕ್ಕೆ ಅನುವು ಮಾಡಿಕೊಡಲು ಕ್ರಮ ಕೈಗೊಳ್ಳಬೇಕೆಂದು ತಿಳಿಸಲಾಗಿದೆ.**
6. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ) ರವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕಛೇರಿ ಪ್ರತಿ.

307
16/12/2022